4008

**II Semester 3 Year LL.B. Examination, March 2022**

**CONTRACT – II**

Duration : 3 Hours Max. Marks : 80

**Instructions** : **1. Answer all five Units.**

**2. One essay type question and one short note/problems is compulsory from each Unit.**

**3. Figures to the right indicate marks.**

**4. Answer should be written either in English or in Kannada completely.**

UNIT – I

Q. No. 1. a) Explain the various modes of discharge of surety from his liability. Marks : 10

ಜಾಮೀನುದಾರನನ್ನು ಹೊಣೆಗಾರಿಕೆಯಿಂದ ವಿಮುಕ್ತಗೊಳಿಸುವ ವಿವಿಧ ವಿಧಾನಗಳನ್ನು ವಿವರಿಸಿ.

OR/ಅಥವಾ

Define indemnity. Discuss the rights of indemnity holder.

ನಷ್ಟ ಭರ್ತಿಯನ್ನು ವ್ಯಾಖ್ಯಾನಿಸಿರಿ. ನಷ್ಟ ಭರ್ತಿಧಾರಕನ ಹಕ್ಕುಗಳ ಬಗ್ಗೆ ಚರ್ಚಿಸಿರಿ.

b) 'A' guarantees payment to 'B' of the price of five sacks of flour to be delivered by B to C and to be paid for in a month. 'B' delivers five sacks of flour to 'C'. 'C' pays for them. Afterwards 'B' delivers four sacks of flour to C for which C does not pay. What is the liability of 'A' ? Give reason. Marks : 6

'ಸ'ನು 'ಬ'ನಿಂದ ಖರೀದಿಸುವ 5 ಚೀಲ ಹಿಟ್ಟಿನ ಬೆಲೆಯನ್ನು 'ಸ'ನು ಒಂದು ತಿಂಗಳೊಳಗೆ ಪಾವತಿ ಮಾಡುವ ಬಗ್ಗೆ 'ಅ'ನು 'ಬ'ನಿಗೆ ಜಾಮೀನುದಾರನಾಗುತ್ತಾನೆ. 'ಬ'ನು 5 ಚೀಲ ಹಿಟ್ಟನ್ನು 'ಸ'ನಿಗೆ ಕೊಡುತ್ತಾನೆ. 'ಸ'ನು ಅವುಗಳ ಬೆಲೆಯನ್ನು ಪಾವತಿಸುತ್ತಾನೆ. ತರುವಾಯ 'ಬ'ನು ನಾಲ್ಕು ಚೀಲ ಹಿಟ್ಟನ್ನು 'ಸ'ನಿಗೆ ಕೊಡುತ್ತಾನೆ. ಇದಕ್ಕೆ 'ಸ'ನು ಹಣ ಪಾವತಿ ಮಾಡುವುದಿಲ್ಲ. ಇಲ್ಲಿ ಜಾಮೀನುದಾರನಾದ 'ಅ'ನ ಹೊಣೆ ಏನು ? ಕಾರಣ ಕೊಡಿ.

OR/ಅಥವಾ

'A' sold certain cattle on the instruction of 'B'. It subsequently turned out that the cattle did not belong to 'B' but to 'C'. 'C' recovered the loss from 'A' and 'A' in turn sued 'B' for indemnity. Decide.
'ಅ'ನು 'ಬ'ನ ಸೂಚನೆಯಂತೆ ಕೆಲವು ಜಾನುವಾರುಗಳನ್ನು ಮಾರಾಟ ಮಾಡುತ್ತಾನೆ. ಆದರೆ ಜಾನುವಾರುಗಳ ನಿಜವಾದ ಮಾಲಿಕ 'ಬ'ನ ಬದಲಾಗಿ 'ಕ' ಆಗಿರುತ್ತಾನೆ. 'ಕ'ನು ತನಗಾದ ನಷ್ಟವನ್ನು 'ಅ'ನಿಂದ ಪಡೆಯುತ್ತಾನೆ. ನಂತರ 'ಅ'ನು 'ಬ'ನ ಮೇಲೆ ನಷ್ಟ ಪರಿಹಾರಕ್ಕಾಗಿ ದಾವೆ ಹೂಡುತ್ತಾನೆ. ನಿರ್ಧರಿಸಿ.

UNIT – II

Q. No. 2. a) Define bailment. Explain the duties of a bailee. Marks : 10
ನಿಕ್ಷೇಪಣೆಯನ್ನು ವ್ಯಾಖ್ಯಾನಿಸಿ. ನಿಕ್ಷೇಪಿತನ ಕರ್ತವ್ಯಗಳನ್ನು ವಿವರಿಸಿ.

OR/**ಅಥವಾ**

Define pledge. Who can make a valid pledge ?
ಗಿರವಿ ಎಂದರೇನು ? ಯಾರು ಊರ್ಜಿತ ಗಿರವಿಯನ್ನು ಇಡಬಹುದು ?

b) 'A' while walking on the road found a jewel and took that jewel to a goldsmith 'B' to know its genuinity. Goldsmith 'B' after testing, refuses to return the jewel. Decide. Marks : 6
'ಅ' ಎಂಬುವನು ದಾರಿಯಲ್ಲಿ ನಡೆದುಕೊಂಡು ಹೋಗುವಾಗ ಒಂದು ಆಭರಣ ಸಿಗುತ್ತದೆ. ಅದು ಚಿನ್ನದ್ದೇ ಎಂದು ತಿಳಿದುಕೊಳ್ಳಲು ಚಿನ್ನದ ಆಚಾರಿ ಹತ್ತಿರ ಹೋಗುತ್ತಾನೆ. ಚಿನ್ನದ ಆಚಾರಿ 'ಬ'ನು ಆಭರಣವನ್ನು ಪರೀಕ್ಷಿಸಿದ ಮೇಲೆ 'ಅ'ನಿಗೆ ಹಿಂತಿರುಗಿಸಲು ನಿರಾಕರಿಸುತ್ತಾನೆ. ನಿರ್ಧರಿಸಿರಿ.

OR/**ಅಥವಾ**

'A' delivers a rough diamond to 'B', a jeweller, to be cut and polished, which is accordingly done. 'A' refuses to pay for the services of 'B'. Decide.
'ಅ' ಎಂಬುವನು 'ಬ' ಎಂಬ ಆಭರಣಕಾರನಿಗೆ ಒಂದು ಒರಟಾದ ವಜ್ರವನ್ನು ಮೆರುಗು ಮಾಡಲು ನೀಡುತ್ತಾನೆ. 'ಬ' ತನ್ನ ಕಾರ್ಯ ನಿರ್ವಹಿಸಿದ ಬಳಿಕ 'ಅ'ನು 'ಬ'ನ ಸೇವೆಗೆ ಹಣ ನೀಡಲು ನಿರಾಕರಿಸುತ್ತಾನೆ. ನಿರ್ಧರಿಸಿ.

UNIT – III

Q. No. 3. a) Explain the rights and duties of agent. Marks : 10

ಕಾರ್ಯಭಾರಿಯ ಹಕ್ಕು ಮತ್ತು ಕರ್ತವ್ಯಗಳನ್ನು ವಿವರಿಸಿರಿ.

OR/ಅಥವಾ

Explain the different modes of termination of agency.

ಕಾರ್ಯಭಾರವನ್ನು ಕೊನೆಗೊಳಿಸುವ ವಿವಿಧ ಪ್ರಕಾರಗಳನ್ನು ವಿವರಿಸಿರಿ.

b) Owner 'A' hand over the horse to his agent 'B' and instructed not to sell under any circumstances. But 'B' sells it to 'C' for Rs. 50,000/- and misappropriated the money. Decide. Marks : 6

'ಅ' ಎಂಬ ಮಾಲಿಕನು ತನ್ನ ಕಾರ್ಯಭಾರಿ 'ಬ'ಗೆ ನೀಡಿ ಯಾವುದೇ ಸಂದರ್ಭದಲ್ಲಿ ಕುದುರೆಯನ್ನು ಯಾರಿಗೂ ಮಾರಬಾರದೆಂದು ನಿರ್ದೇಶಿಸುತ್ತಾನೆ. ಆದರೆ ಕಾರ್ಯಭಾರಿ 'ಬ'ನು ಕುದುರೆಯನ್ನು ರೂ. 50,000/-ಕ್ಕೆ ಮಾರಿ ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಾನೆ. ನಿರ್ಧರಿಸಿರಿ.

OR/ಅಥವಾ

Agency by ratification.

ಸ್ಥಿರೀಕರಣದಿಂದ ಆಗುವ ಕಾರ್ಯಭಾರ.

UNIT – IV

Q. No. 4. a) Define partnership. Distinguish it from an Hindu undivided family. Marks : 10

ಪಾಲುದಾರಿಕೆಯನ್ನು ವ್ಯಾಖ್ಯಾನಿಸಿ. ಇದು ಹಿಂದೂ ಅವಿಭಕ್ತ ಕುಟುಂಬದಿಂದ ಹೇಗೆ ಭಿನ್ನವಾಗಿದೆ ?

OR/ಅಥವಾ

Explain the liability of the partners to third parties and among themselves.

ಮೂರನೇ ವ್ಯಕ್ತಿಗಳಿಗೆ ಪಾಲುದಾರರ ಬಾಧ್ಯತೆಗಳನ್ನು ಮತ್ತು ತಮ್ಮೊಳಗಿನ ಬಾಧ್ಯತೆಗಳನ್ನು ವಿವರಿಸಿರಿ.

b) Goodwill of a business. Marks : 6

ವ್ಯಾಪಾರದ ಸುನಾಮ.

OR/ಅಥವಾ

Types of partners.

ಪಾಲುದಾರರ ವಿಧಗಳು.

UNIT – V

Q. No. 5. a) Who is an unpaid seller ? What are his rights ? Marks : 10

ಹಣ ಸಂದಾಯವಾಗದ ಮಾರಾಟಗಾರ ಎಂದರೆ ಯಾರು ? ಅವನ ಹಕ್ಕುಗಳು ಯಾವುವು ?

OR/**ಅಥವಾ**

Discuss the doctrine of caveat emptor with exceptions, if any.

ಕೊಳ್ಳುವವನೇ ಎಚ್ಚರ ಎನ್ನುವ ಸಿದ್ಧಾಂತವನ್ನು ಇರಬಹುದಾದ ಅಪವಾದಗಳೊಂದಿಗೆ ಚರ್ಚಿಸಿ.

b) 'A' bought a bun at a baker's shop. The bun contained a stone crystals on which A broke one of his teeth. Decide. Marks : 6

'ಅ' ಎಂಬುವನು ಒಂದು ಬೇಕರಿಯಿಂದ ಬನ್ ಖರೀದಿಸಿ ತಂದು ತಿಂದನು. ಬನ್‌ನಲ್ಲಿದ್ದ ಒಂದು ಕಲ್ಲಿನ ಹರಳಿನ ಪರಿಣಾಮವಾಗಿ ತನ್ನ ಒಂದು ಹಲ್ಲನ್ನು ಕಳೆದುಕೊಳ್ಳುತ್ತಾನೆ. ನಿರ್ಧರಿಸಿ.

OR/**ಅಥವಾ**

'A', 'B' and 'C' are joint owners of a diamond. It is in possession of A with the permission of 'B' and 'C'. 'A' sells it to 'D'. 'D' buys in good faith without any notice that A has no authority to sell. Will 'D' gets good title ? Decide.

'ಅ', 'ಬ' ಮತ್ತು 'ಕ'ರು ಒಂದು ವಜ್ರದ ಜಂಟಿ ಮಾಲೀಕರಾಗಿದ್ದಾರೆ. ಆ ವಜ್ರವು 'ಬ' ಮತ್ತು 'ಕ'ರ ಸಮ್ಮತಿಯೊಂದಿಗೆ 'ಅ'ನ ಸ್ವಾಧೀನದಲ್ಲಿದೆ. ಆ ವಜ್ರವನ್ನು 'ಅ'ನು 'ಡ' ಎಂಬುವವನಿಗೆ ಮಾರಾಟ ಮಾಡುತ್ತಾನೆ. 'ಡ'ನು 'ಅ'ನಿಗೆ ಮಾರುವ ಹಕ್ಕು ಇಲ್ಲ ಎಂದು ತಿಳಿಯದೇ ಸದ್ಭಾವನೆಯಿಂದ ಖರೀದಿಸುತ್ತಾನೆ. ಇಲ್ಲಿ 'ಡ'ನಿಗೆ ಕಾನೂನು ಬದ್ಧವಾದ ಮಾಲೀಕತ್ವ ಸಿಗಬಹುದಾ ? ನಿರ್ಧರಿಸಿ.

---